# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 325

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 06-12-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಇಲಾಖೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸಾರಿಗೆ ನಿಗಮಗಳಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>**ಕ.ರಾ.ರ.ಸಾ.ನಿಗಮ**<br><br>ನಿಗಮದಲ್ಲಿ ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿಯಲ್ಲಿ ಮಂಜೂರಾಗಿರುವ 50 ಸಂಖ್ಯೆ ಹವಾನಿಯಂತ್ರಿತ ವಿದ್ಯುತ್ ಚಾಲಿತ ವಾಹನಗಳನ್ನು ಜಿ.ಸಿ.ಸಿ ಆಧಾರದಲ್ಲಿ ಬೆಂಗಳೂರು ಸೇರಿದಂತೆ 6 ನಗರಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ ಹಾಗೂ 300 ಸಂಖ್ಯೆಯ ವಿದ್ಯುತ್ ಚಾಲಿತ ವಾಹನಗಳನ್ನು ಜಿ.ಸಿ.ಸಿ (ಒಟ್ಟು ಒಪ್ಪಂದದ ವೆಚ್ಚ) ಆಧಾರದ ಮೇರೆಗೆ ಕಾರ್ಯಾಚರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಬೆಂ.ಮ.ಸಾ.ಸಂಸ್ಥೆ**<br><br>ಸಂಸ್ಥೆಯು ಈಗಾಗಲೇ ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ 90 ಮಿಡಿ ಹವಾನಿಯಂತ್ರಣಾ ರಹಿತ ಎಲೆಕ್ಟ್ರಿಕ್ ಬಸ್‌ಗಳು ಹಾಗೂ ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿ 300 ಹವಾನಿಯಂತ್ರಣಾ ರಹಿತ ಎಲೆಕ್ಟ್ರಿಕ್ ಬಸ್‌ಗಳು ಒಟ್ಟು 390 ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಆಚರಣೆ ಮಾಡಲಾಗುತ್ತಿದೆ.<br><br>➢ ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿಯಲ್ಲಿ M/s.Convergence Energy Services Limited (CESL) ಮುಖಾಂತರ 921 ಹವಾನಿಯಂತ್ರಣ ರಹಿತ 12 ಮೀಟರ್ ಉದ್ದದ ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಆಧಾರದ ಮೇಲೆ ಆಚರಣೆ ಮಾಡಲು ಮೇ\\ಟಾಟಾ ಮೋಟಾರ್ಸ್ ರವರಿಗೆ ಕಾರ್ಯಾದೇಶ ನೀಡಲಾಗಿದ್ದು, 01 ಪ್ರೋಟೋ ವಾಹನವು ಸರಬರಾಜಾಗಿ, ಕಾರ್ಯಾಚರಣೆಯಲ್ಲಿರುತ್ತದೆ ಹಾಗೂ ಉಳಿದ 920 ಬಸ್ಸುಗಳನ್ನು ಮಾರ್ಚ್ 2024ರ ಅಂತ್ಯದೊಳಗೆ ಸಂಸ್ಥೆಗೆ ಸೇರ್ಪಡೆಗೊಳಿಸಲಾಗುವುದು.<br><br>➢ ಮುಂದುವರೆದು, ರಾಜ್ಯ ನಗರ ಸಾರಿಗೆ ನಿಧಿ(SUTF), DULT ಹಾಗೂ National Clean Air Programme (NCAP) ಯೋಜನೆಯಡಿ 10 ಡಬಲ್ ಡೆಕ್ಕರ್ |

| | | |
|---|---|---|
| | | ಹವಾನಿಯಂತ್ರಣಾ ಎಲೆಕ್ಟ್ರಿಕ್ ಬಸ್‌ಗಳನ್ನು ಮತ್ತು 9 ಮೀಟರ್ ಉದ್ದದ 120 ಹವಾನಿಯಂತ್ರಣಾ ರಹಿತ ಎಲೆಕ್ಟ್ರಿಕ್ ಬಸ್‌ಗಳನ್ನು ಜಿಸಿಸಿ ಮಾದರಿಯಲ್ಲಿ ಆಚರಣೆ ಮಾಡಲು ಯೋಜಿಸಲಾಗಿರುತ್ತದೆ.<br><br>➢ ಪ್ರಸ್ತುತ 320 ಹವಾನಿಯಂತ್ರಣಾ ಎಲೆಕ್ಟ್ರಿಕ್ ಬಸ್‌ಗಳನ್ನು ಜಿಸಿಸಿ ಮಾದರಿಯಲ್ಲಿ ಆಚರಣೆ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ವಾ.ಕ.ರ.ಸಾ.ಸಂಸ್ಥೆ<br><br>ಸಂಸ್ಥೆಯಲ್ಲಿ 450 ಎಲೆಕ್ಟ್ರಿಕ್ ವಾಹನಗಳನ್ನು ಜಿ.ಸಿ.ಸಿ. (Gross Cost Contract) ಮಾದರಿಯಲ್ಲಿ ಅಳವಡಿಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| ಆ. | ಶಕ್ತಿ ಯೋಜನೆಯು ಜಾರಿಗೆ ಬಂದಾಗಿನಿಂದ ಇದುವರೆಗೂ ಎಷ್ಟು ಸಾರಿಗೆ ಬಸ್‌ಗಳನ್ನು ಖರೀದಿಸಲಾಗಿದೆ; | ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಶಕ್ತಿ ಯೋಜನೆಯು ಜಾರಿಗೆ ಬಂದಾಗಿನಿಂದ ಖರೀದಿಸಿರುವ ವಾಹನಗಳ ವಿವರ ಕೆಳಕಂಡಂತಿದೆ:<br><br>**ಕ.ರಾ.ರ.ಸಾ.ನಿಗಮ:-**<br><br>➢ ಹೊಸ 90 ಸಂಖ್ಯೆ ಕರ್ನಾಟಕ ಸಾರಿಗೆ ಮಾದರಿ ವಾಹನಗಳನ್ನು ಖರೀದಿಸಲಾಗಿದೆ.<br>➢ 600 ಸಂಖ್ಯೆ ಕರ್ನಾಟಕ ಸಾರಿಗೆ ಮಾದರಿ ವಾಹನಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>➢ 150 ಸಂಖ್ಯೆ ಟಾಟಾ ನಗರ ಸಾರಿಗೆ ಮಾದರಿ ವಾಹನಗಳನ್ನು ಬಿ.ಎಂ.ಟಿ.ಸಿ.ಯಿಂದ ವರ್ಗಾಯಿಸಿಕೊಂಡು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಬಸ್ಸುಗಳನ್ನು ಖರೀದಿಸಲು / ಜಿ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಿಸಲು ಪ್ರಕ್ರಿಯೆ ಜಾರಿಯಲ್ಲಿರುತ್ತದೆ:<br><br>➢ ಸರ್ಕಾರದಿಂದ ನಿಗಮಕ್ಕೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಕರ್ನಾಟಕ ಸಾರಿಗೆ ಸಾಮಾನ್ಯ ಮಾದರಿಯ ಒಟ್ಟು 250 ಸಂಖ್ಯೆ ಹೊಸ ವಾಹನಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.6235.44 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>➢ 25 ಹೊಸ ಸಾಮಾನ್ಯ ಕರ್ನಾಟಕ ಸಾರಿಗೆ ಮಾದರಿ ವಾಹನಗಳನ್ನು ಡಿಸೆಂಬರ್-23ರ ಅಂತ್ಯದೊಳಗೆ ಸೇರ್ಪಡೆಗೊಳಿಸಲು ಕ್ರಮ ಜರುಗಿಸಲಾಗಿದೆ.<br><br>➢ 100 ಹೊಸ ಸಾಮಾನ್ಯ ಬಸ್ಸುಗಳನ್ನು ಖರೀದಿಸಲು |

| | | |
|---|---|---|
| | | ಸರಬರಾಜು ಆದೇಶ ನೀಡಿದ್ದು, ಈ ಪೈಕಿ 90 ಬಸ್ಸುಗಳು ಸರಬರಾಜಾಗಿರುತ್ತದೆ.<br>➢ 200 ಹೊಸ ಸಾಮಾನ್ಯ ಬಸ್ಸುಗಳನ್ನು ಖರೀದಿಸಲು ಸರಬರಾಜು ಆದೇಶ ನೀಡಲಾಗಿದೆ.<br>➢ 40 ಪಲ್ಲಕ್ಕಿ ನಾನ್-ಎ.ಸಿ. ಸ್ಲೀಪರ್ ಬಸ್ಸುಗಳನ್ನು ಖರೀದಿಸಲಾಗಿದೆ.<br>➢ 04 ಎ.ಸಿ. ಮತ್ತು 04 ನಾನ್-ಎ.ಸಿ. ಸ್ಲೀಪರ್ ಬಸ್ಸುಗಳನ್ನು ಖರೀದಿಸಲಾಗಿದೆ.<br>➢ 300 ಸಂಖ್ಯೆ ವಿದ್ಯುತ್ ಚಾಲಿತ ವಾಹನಗಳನ್ನು ಜಿ.ಸಿ.ಸಿ ಆಧಾರದಲ್ಲಿ ಕಾರ್ಯಾಚರಣೆಗೊಳಿಸಲು ಕ್ರಮ ಜರುಗಿಸಲಾಗುತ್ತಿದ್ದು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br>➢ 350 ಸಂಖ್ಯೆ ಸಾಮಾನ್ಯ ಬಸ್ಸುಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.<br><br>**ವಾ.ಕ.ರ.ಸಾ. ಸಂಸ್ಥೆ:**<br><br>ಸಂಸ್ಥೆಯಲ್ಲಿ ಗ್ರಾಮಾಂತರ ಮಾದರಿಯ ಒಟ್ಟು 50 ವಾಹನಗಳನ್ನು ಖರೀದಿಸಲಾಗಿದೆ.<br><br>ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಬಸ್ಸುಗಳನ್ನು ಖರೀದಿಸಲು ಪ್ರಕ್ರಿಯೆ ಜಾರಿಯಲ್ಲಿರುತ್ತದೆ:<br>➢ 50 ಗ್ರಾಮಾಂತರ ಸಾರಿಗೆ ವಾಹನಗಳನ್ನು ಖರೀದಿಸಲಾಗಿದೆ.<br>➢ ಗ್ರಾಮಾಂತರ ಸಾರಿಗೆಯ 285 ಹೊಸ ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>➢ ಸರ್ಕಾರದಿಂದ ಸಂಸ್ಥೆಗೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.150.00 ಕೋಟಿಗಳ ಅನುದಾನ ಸುಮಾರು 375 ಸಂಖ್ಯೆ ಗ್ರಾಮಾಂತರ ಸಾರಿಗೆಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.9353.16 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>➢ ಡಲ್ಟ್ ಆರ್ಥಿಕ ಸಹಾಯದಿಂದ 100 ನಗರ ಸಾರಿಗೆ ಬಸ್ಸುಗಳ ಖರೀದಿ ಪ್ರಕ್ರಿಯೆ ಸಹ ಜಾರಿಯಲ್ಲಿರುತ್ತದೆ.<br>➢ 20-ನಾನ್ ಎ/ಸಿ ಸ್ಲೀಪರ್ ಹಾಗೂ 04-ಎ/ಸಿ ಸ್ಲೀಪರ್ ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

| | | |
|---|---|---|
| | | **ಕ.ಕ.ರ.ಸಾ.ನಿಗಮ**:<br>ನಿಗಮದಿಂದ ಪ್ರಸಕ್ತ ಸಾಲಿನಲ್ಲಿ 612 ಮೊಫಿಸಿಲ್, 02 ವೋಲ್ವೋ, 02 ಎ.ಸಿ. ಸ್ಲೀಪರ್ ಮತ್ತು 05 ನಾನ್-ಎ.ಸಿ.ಸ್ಲೀಪರ್ ವಾಹನಗಳು ಒಳಗೊಂಡು ಒಟ್ಟು 621 ವಾಹನಗಳನ್ನು ಖರೀದಿಸಲಾಗಿರುತ್ತದೆ. ಇನ್ನೂ 04 ವೋಲ್ವೋ, 25 ನಾನ್-ಎ.ಸಿ.ಸ್ಲೀಪರ, ಹಾಗೂ 02 ಎ.ಸಿ.ಸ್ಲೀಪರ್ ಬಸ್ಸುಗಳು ನಿಗಮಕ್ಕೆ ಸರಬರಾಜಾಗಬೇಕಾಗಿದ್ದು, ಕವಚ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಬಸ್ಸುಗಳನ್ನು ಖರೀದಿಸಲು ಪ್ರಕ್ರಿಯೆ ಜಾರಿಯಲ್ಲಿರುತ್ತದೆ:<br>➢ ಸರ್ಕಾರದಿಂದ ನಿಗಮಕ್ಕೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಪೂರ್ಣ ಕವಚ ನಿರ್ಮಿತ 250 ವೇಗದೂತ ಸಾರಿಗೆಗಳನ್ನು ಖರೀದಿಸಲು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.6235.44 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>➢ ಪೂರ್ಣ ಕವಚ ನಿರ್ಮಿತ 93 ನಗರ ಸಾರಿಗೆ ಬಸ್ಸುಗಳನ್ನು ಡಲ್ಟ್ ಆರ್ಥಿಕ ಸಹಾಯದಿಂದ ಖರೀದಿಸಲು ಮಂಜೂರಾತಿ ದೊರೆತಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>ಶಕ್ತಿ ಯೋಜನೆಗೆ ಇನ್ನೂ ಹೆಚ್ಚಿನ ಶಕ್ತಿ ತುಂಬಲು 2023-24 ನೇ ಸಾಲಿನಲ್ಲಿ ಒಟ್ಟು 700 ಹೊಸ ವಾಹನಗಳ ಸೇರ್ಪಡೆ ಮಾಡಲು ಯೋಜನೆ ರೂಪಿಸಲಾಗಿದೆ. |
| ಇ. | ಯಾವ ಯಾವ ಕಂಪನಿಗಳಿಂದ ಎಷ್ಟು ಮೊತ್ತಕ್ಕೆ ಬಸ್‌ಗಳನ್ನು ಖರೀದಿಸಲಾಗಿದೆ; | **ಕ.ರಾ.ರ.ಸಾ.ನಿಗಮ**:<br>ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಇದುವರೆವಿಗೂ ಮೆ\|\| ಅಶೋಕ್ ಲೇಲ್ಯಾಂಡ್ ಪ್ರೈವೆಟ್ ಲಿ. ಸಂಸ್ಥೆಯಿಂದ ಒಟ್ಟು 90 ಹೊಸ ಕರ್ನಾಟಕ ಸಾರಿಗೆ ಬಸ್‌ಗಳನ್ನು ರೂ.36.08 ಕೋಟಿ ವೆಚ್ಚದಲ್ಲಿ ಖರೀದಿಸಲಾಗಿದೆ.<br>**ವಾ.ಕ.ರ.ಸಾ.ಸಂಸ್ಥೆ:**<br>ಮೆ\|\| ಅಶೋಕ ಲೇಲ್ಯಾಂಡ್ ಕಂಪನಿಯವರಿಂದ ಪ್ರತಿ ವಾಹನಕ್ಕೆ ರೂ.39.89 ಲಕ್ಷದಂತೆ ಒಟ್ಟು ರೂ. 19.94 ಕೋಟಿ ಮೊತ್ತದಲ್ಲಿ ಗ್ರಾಮಾಂತರ ಮಾದರಿಯ ಒಟ್ಟು 50 ವಾಹನಗಳನ್ನು ಖರೀದಿಸಲಾಗಿದೆ.<br>**ಕ.ಕ.ರ.ಸಾ.ನಿಗಮ:**<br>ಪ್ರಸಕ್ತ ಸಾಲಿನಲ್ಲಿ ಸರಬರಾಜಾದ ಬಸ್‌ಗಳ ವಿವರ ಈ |

<table>
<tr><td></td><td></td><td>ಕೆಳಗಿನಂತಿದೆ.
<table>
<tr><th>ವಾಹನ ಮಾದರಿ</th><th>ಕಂಪನಿಯ ಹೆಸರು</th><th>ಒಟ್ಟು ಬಸ್‌ಗಳ ಸಂಖ್ಯೆ</th><th>ಪ್ರತಿ ಬಸ್ಸಿನ ಅಂತಿಮ ದರ (ರೂ.ಲಕ್ಷಗಳಲ್ಲಿ)</th><th>ಒಟ್ಟು ಮೊತ್ತ (ರೂ. ಕೋಟಿಗಳಲ್ಲಿ)</th></tr>
<tr><td>ಪೂರ್ಣ ಕವಚ ವೇಗದೂತ</td><td rowspan="3">ಮೇ|| ಅಶೋಕ ಲೇಲ್ಯಾಂಡ್ ಲಿಮಿಟೆಡ್</td><td>612</td><td>39.99</td><td>244.74</td></tr>
<tr><td>ಪೂರ್ಣ ಕವಚ ನಿರ್ಮಿತ ಹವಾನಿ ಯಂತ್ರಣ ರಹಿತ ಸ್ಲೀಪರ್</td><td>5</td><td>44.34</td><td>2.22</td></tr>
<tr><td>ಪೂರ್ಣ ಕವಚ ನಿರ್ಮಿತ ಹವಾನಿ ಯಂತ್ರಣ ರಹಿತ ಸ್ಲೀಪರ್</td><td>2</td><td>51.06</td><td>1.02</td></tr>
<tr><td>ಪೂರ್ಣ ಕವಚ ನಿರ್ಮಿತ ಮಲ್ಟಿ ಆಕ್ಸಲ್ ಹವಾನಿ ಯಂತ್ರಿತ ಸ್ಲೀಪರ್</td><td>ಮೇ|| ವಿ ಇ ಕಮರ್ಶಿಯಲ್ ವೆಹಿಕಲ್ ಲಿಮಿಟೆಡ್</td><td>2</td><td>173.32</td><td>3.47</td></tr>
</table></td></tr>
<tr><td>ಈ.</td><td>ಇಲಾಖೆಗಳಲ್ಲಿ ಹಳೆ ಬಸ್ಸುಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ; (ವಿವರ ನೀಡುವುದು)</td><td>ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಹಾಗೂ ಕ.ಕ.ರ.ಸಾ.ನಿಗಮ:-<br>ಸದರಿ ಸಾರಿಗೆ ಸಂಸ್ಥೆಗಳಲ್ಲಿ ಹಳೆ ಬಸ್ಸುಗಳನ್ನು ಮೆ: ಮೆಟಲ್ ಸ್ಕ್ರಾಪ್ ಟ್ರೇಡಿಂಗ್ ಕಂಪನಿ (MSTC) (ಭಾರತ ಸರ್ಕಾರದ ಉದ್ಯಮ) ಇವರ ಇ-ಹರಾಜು ತಂತ್ರಾಂಶದ ಮೂಲಕ ವಿಲೇವಾರಿ ಮಾಡಲಾಗುತ್ತಿದೆ.<br>ಬೆಂ.ಮ.ಸಾ.ಸಂಸ್ಥೆ:-<br>ಸಂಸ್ಥೆಯಲ್ಲಿ ನಿರುಪಯುಕ್ತಗೊಳಿಸಿದ ವಾಹನಗಳನ್ನು ಇ-ಹರಾಜು ಪದ್ಧತಿಯಲ್ಲಿ H1 ಬಿಡ್ಡುದಾರರಿಗೆ ಸಂಸ್ಥೆಯ ನಿರುಪಯುಕ್ತ ವಸ್ತುಗಳ ಹಾಗೂ ವಾಹನಗಳ ವಿಲೇವಾರಿ ಸಮಿತಿಯ ಅನುಮೋದನೆ ಪಡೆದು ವಿಲೇವಾರಿ ಮಾಡಲಾಗುತ್ತಿದೆ.</td></tr>
<tr><td>ಉ.</td><td>ಶಕ್ತಿ ಯೋಜನೆಯಿಂದ</td><td>ಶಕ್ತಿ ಯೋಜನೆಯ ಆರಂಭದಲ್ಲಿ ಹಾಗೂ ಶಕ್ತಿ</td></tr>
</table>

ಪ್ರತಿನಿತ್ಯ ಪ್ರಯಾಣಿಸುತ್ತಿರುವ ಮಹಿಳೆಯರ ಸಂಖ್ಯೆ ಮೊದಲಿಗಿಂತ ಅಂದಾಜು ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ;

ಯೋಜನೆ ಅನುಷ್ಠಾನ ನಂತರದಲ್ಲಿ ಪ್ರತಿದಿನ ಪ್ರಯಾಣಿಸುತ್ತಿರುವ ಮಹಿಳೆಯರ ಸರಾಸರಿ ಸಂಖ್ಯೆಯ ನಿಗಮವಾರು ವಿವರ ಈ ಕೆಳಕಂಡಂತಿದೆ.

| **ಸಂಸ್ಥೆ** | **ಶಕ್ತಿ ಪೂರ್ವ ದಿನವಹಿ ಸರಾಸರಿ ಮಹಿಳಾ ಪ್ರಯಾಣಿಕರು (ಲಕ್ಷ)** | **ಶಕ್ತಿ ನಂತರ ದಿನವಹಿ ಸರಾಸರಿ ಮಹಿಳಾ ಪ್ರಯಾಣಿಕರು (ಲಕ್ಷ)** | **ಶೇ. (%)** |
|---|---|---|---|
| ಕರಾರಸಾ. | 15.87 | 18.34 | 15.56% |
| ವಾಕರಸಾ | 8.00 | 14.20 | 77.5% |
| ಕಕರಸಾ | 6.33 | 8.57 | 35.39% |

**ಬೆಂ.ಮ.ಸಾ.ಸಂಸ್ಥೆಯಲ್ಲಿ**: ಶಕ್ತಿ ಯೋಜನೆಯ ಅನುಷ್ಠಾನದ ಪೂರ್ವದಲ್ಲಿ ಪ್ರತ್ಯೇಕವಾಗಿ ಮಹಿಳಾ ಪ್ರಯಾಣಿಕರ ಮಾಹಿತಿಯನ್ನು ಸಂಗ್ರಹಿಸಿರುವುದಿಲ್ಲ.

ಶಕ್ತಿ ಯೋಜನೆಯ ಅನುಷ್ಠಾನದ ಪೂರ್ವ ಹಾಗೂ ನಂತರ ಸಂಸ್ಥೆಯ ಬಸ್ಸುಗಳಲ್ಲಿ ಪ್ರತಿದಿನ ಪ್ರಯಾಣಿಸುವ ಒಟ್ಟು ಸರಾಸರಿ ಪ್ರಯಾಣಿಕರ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.

**(ಲಕ್ಷಗಳಲ್ಲಿ)**

| | |
|---|---|
| ಶಕ್ತಿ ಯೋಜನೆಯ ಪೂರ್ವದಲ್ಲಿ (ಮೇ-2023) | 33.67 |
| ಶಕ್ತಿ ಯೋಜನೆಯ ನಂತರ | 40.41 |

ಒಟ್ಟು ಸರಾಸರಿ ಪ್ರಯಾಣಿಕರ ಸಂಖ್ಯೆಯನ್ನು ಪರಿಗಣಿಸಿದಾಗ, ಶಕ್ತಿ ಯೋಜನೆಯ ನಂತರ ಶೇ.20.02ರಷ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುತ್ತದೆ.

---

ಊ. ಈ ಯೋಜನೆಯಿಂದ ಪ್ರತಿನಿತ್ಯ ಕೆಲಸಕ್ಕೆ ಹೋಗುವ ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ವೃದ್ಧಾಪ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಪರ್ಯಾಯವಾಗಿ ರೂಪಿಸಿರುವ ಯೋಜನೆಗಳಾವುವು?

**ಕ.ರಾ.ರ.ಸಾ. ನಿಗಮ** :

- ಮಹಿಳೆಯರಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದರಿಂದ ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದು, ಇದರಿಂದಾಗಿ ಶಾಲಾ ಮಕ್ಕಳು ಹಾಗೂ ವೃದ್ಧರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ಕೆಲವು ಸ್ಥಳಗಳಲ್ಲಿ ವರದಿಯಾಗಿದ್ದು, ಅಂತಹ ಸ್ಥಳಗಳನ್ನು ಗುರುತಿಸಿ ಆ ಸ್ಥಳಗಳಿಗೆ ನಿಗಮದ ಸಿಬ್ಬಂದಿಗಳನ್ನು ಮೇಲ್ವಿಚಾರಣೆಗಾಗಿ ನಿಯೋಜಿಸಲಾಗುತ್ತಿದೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಸರತಿಗಳನ್ನು ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.

ಶಾಲಾ/ ಕಾಲೇಜು ವಿದ್ಯಾರ್ಥಿಗಳಿಗೆ ಅವರ ಶಾಲಾ ಕಾಲೇಜು ಸಮಯಕ್ಕೆ ಅವಶ್ಯಕತೆಗೆ ಅನುಗುಣವಾಗಿ ಸುತ್ತುವಳಿಗಳು/ ಬಸ್ಸುಗಳನ್ನು ಕಲ್ಪಿಸಲು ಈ ಕೆಳಕಂಡಂತೆ

| | | |
|---|---|---|
| | | ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>➢ ಗ್ರಾಮೀಣ ಪ್ರದೇಶಗಳ ವಿಭಾಗದ ವ್ಯಾಪ್ತಿಯಲ್ಲಿ ಬರುವ ಶಾಲಾ/ ಕಾಲೇಜುಗಳ ಪ್ರಾಂಶುಪಾಲರು/ ಮುಖ್ಯಸ್ಥರುಗಳನ್ನು ಸಂಪರ್ಕಿಸಿ, ಶಾಲಾ/ ಕಾಲೇಜುಗಳ ಸಮಯಗಳನ್ನು ತಿಳಿದುಕೊಂಡು ಸದರಿ ಸಮಯಕ್ಕೆ ಸಾರಿಗೆಗಳನ್ನು ಕಾರ್ಯಾಚರಿಸಲು.<br>➢ ಶಾಲಾ/ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿಗೆ ಸೇರುವ ಬಸ್ ನಿಲ್ದಾಣ/ ಜಂಕ್ಷನ್‌ಗಳಲ್ಲಿ ಸಾರಿಗೆ ಸೇವೆಗಳ ಮೇಲ್ವಿಚಾರಣೆಗೆ ಸಂಚಾರ ನಿಯಂತ್ರಕರು/ ಇತರೆ ಮೇಲ್ವಿಚಾರಕರನ್ನು ನಿಯೋಜಿಸಿ ಸುಗಮ ಕಾರ್ಯಾಚರಣೆ ಕೈಗೊಳ್ಳಲು.<br>➢ ವಿಭಾಗದ ಎಲ್ಲಾ ಚಾಲನಾ ಸಿಬ್ಬಂದಿಗಳಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳು ಬಸ್ಸುಗಳಲ್ಲಿ ಪ್ರಯಾಣಿಸಲು ಅನುವಾಗಲು ನಿಗದಿತ ಬಸ್ ನಿಲ್ದಾಣಗಳಲ್ಲಿ ನಿಲುಗಡೆ ನೀಡಿ ಅವರನ್ನು ಹತ್ತಿಸಿ/ ಇಳಿಸಿಕೊಂಡು ಮುಂದೆ ಹೋಗುವುದರ ಜೊತೆಗೆ ವಿದ್ಯಾರ್ಥಿಗಳೊಂದಿಗೆ ಸೌಜನ್ಯಯುತವಾಗಿ ವರ್ತಿಸಲು.<br>ಪ್ರಸ್ತುತ, ಕಲ್ಪಿಸುತ್ತಿರುವ ಸಾರಿಗೆಗಳು ಗ್ರಾಮೀಣ ಭಾಗದ ಶಾಲಾ/ ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಇರುತ್ತದೆ. ಅದಾಗ್ಯೂ, ಹೆಚ್ಚುವರಿ ಬೇಡಿಕೆ ಬಂದಲ್ಲಿ, ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೂಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ<br>**ಬೆಂ.ಮ.ಸಾ.ಸಂಸ್ಥೆ :**<br>➢ ಸಂಸ್ಥೆಯು ಈಗಾಗಲೇ ತನ್ನ ಕಾರ್ಯಾಚರಣೆ ವ್ಯಾಪ್ತಿಗೆ ಒಳಪಡುವ ಹಾಗೂ ಬಸ್ಸುಗಳ ಸಂಚಾರಕ್ಕೆ ಸೂಕ್ತ ರಸ್ತೆಗಳಿರುವ ಎಲ್ಲಾ ಪ್ರದೇಶಗಳಿಗೂ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ದಿನಾಂಕ:31-10-2023ರಂತೆ ಸಂಸ್ಥೆಯು ಪ್ರತಿದಿನ ಆಚರಣೆಗೊಳಿಸುತ್ತಿರುವ 5,114 ಸಾಮಾನ್ಯ ಸೇವೆ ಅನುಸೂಚಿ /ಬಸ್ಸುಗಳಿಂದ 53,778 ಸುತ್ತುವಳಿಗಳ ಮೂಲಕ 10.27 ಲಕ್ಷ ಕಿ.ಮೀ ಕ್ರಮಿಸುವ ಮೂಲಕ ಸಾರಿಗೆ ಸೌಲಭ್ಯ ಒದಗಿಸುತ್ತಿದೆ. ಮಾರ್ಚ್-2023 ಕ್ಕೆ ಹೋಲಿಸಲಾಗಿ, 1,242 ಸುತ್ತುವಳಿಗಳನ್ನು ಹೆಚ್ಚಿಸಿ ಪ್ರತಿದಿನ ಒಟ್ಟು 53,778 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br>➢ ಸಾರ್ವಜನಿಕ ಪ್ರಯಾಣಿಕರ /ವಿದ್ಯಾರ್ಥಿ ಸಮುದಾಯದ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ, ಮೂಲಭೂತ ಸೌಕರ್ಯಗಳ ಲಭ್ಯತೆಗನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸುವುದು, ಹಾಲಿಯಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು ಮತ್ತು ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಪರಿಷ್ಕರಿಸಿ |

| | | |
|---|---|---|
| | | ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>**ವಾ.ಕ.ರ.ಸಾ.ಸಂಸ್ಥೆ :**<br>➢ ಪ್ರಸ್ತುತ ಸಂಸ್ಥೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಸಾರ್ವಜನಿಕರ / ವಿದ್ಯಾರ್ಥಿಗಳ ಬೇಡಿಕೆ/ ಪರಿಶೀಲಿಸಿ ಅವಶ್ಯಕತೆಗೆ ಅನುಗುಣವಾಗಿ 1114 ಹೆಚ್ಚುವರಿ ಸರತಿಗಳನ್ನು ಅಳವಡಿಸಿ ಕಾರ್ಯಾಚರಿಸಲಾಗುತ್ತಿದೆ.<br>➢ ಮುಂದಿನ ದಿನಗಳಲ್ಲಿ ಸಂಸ್ಥೆಗೆ ಅವಶ್ಯವಿರುವ ಹೊಸ ವಾಹನಗಳ ಖರೀದಿ ಹಾಗೂ ಚಾಲನಾ ಸಿಬ್ಬಂದಿಗಳ ನೇಮಕಾತಿಗೆ ಕ್ರಮವಹಿಸಲಾಗಿದ್ದು, ಲಭ್ಯತೆಯ ನಂತರ ಇನ್ನೂ ಹೆಚ್ಚಿನ ಬೇಡಿಕೆ ಇರುವ ಮಾರ್ಗಗಳಿಗೆ ಆಧ್ಯತೆಯ ಮೇರೆಗೆ ಹೆಚ್ಚುವರಿ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.<br><br>**ಕ.ಕ.ರ.ಸಾ.ನಿಗಮ :**<br>ಶಕ್ತಿ ಯೋಜನೆ ಜಾರಿಗೊಳಿಸಿದ ನಂತರ ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ಮತ್ತು ವೃದ್ಧರಿಗೆ ತೊಂದರೆಯಾಗದಂತೆ ಒಟ್ಟು 321 ಅನುಸೂಚಿಗಳನ್ನು ಹೆಚ್ಚಿಸಿ ಪ್ರತಿ ದಿನ 4357 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಮುಂದುವರೆದು ಮಾರ್ಚ್-23ರ ಅಂತ್ಯಕ್ಕೆ ಒಟ್ಟು 243 ಹೊಸ ಅನುಸೂಚಿಗಳನ್ನು ಸೇರ್ಪಡೆಗೊಳಿಸಿ ಒಟ್ಟು 4600 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. |

ಸಂಖ್ಯೆ: ಟಿಡಿ 186 ಟಿಸಿಕ್ಯೂ 2023

(ರಾಮಲಿಂಗಾ ರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು